ದಿನಾಂಕ 08-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : 2 ನೇ ಪ್ರತಿವಾದಿಯ ಪರ ಶ್ರೀ ಎಸ್.ಎಸ್.ಎ ವಕೀಲರಿಂದ ಶ್ರೀ ಎಫ್.ಬಿ.ಎಂ ವಕೀಲರರ ಪರವಾಗಿ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಂಗತಿಗಳು ಸತ್ಯದಿಂದ ಕೂಡಿದ್ದು, ಪ್ರಮಾಣ ಪತ್ರದಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ಸಾಕ್ಷಿಯು ನಿ.ಡಿ-25 ರ ಮೂಲ ನೋಂದಾಯಿತ ದಾನ ಪತ್ರವನ್ನು ನೋಡುತ್ತಿದ್ದು, ಅದರಲ್ಲಿ ತಮ್ಮ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ತನ್ನ ಸಹಿಯನ್ನು ನಿ.ಡಿ-25(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ದಾನ ಪತ್ರಕ್ಕೆ ರಾಜೇಂದ್ರ ಗುರುರಾವ್ ದೇಸಾಯಿ, ರಾಮಣ್ಣ ತಿಪ್ಪಣ್ಣ ಕರಗುಂದ, ಹುಚ್ಚಪ್ಪ ನಿಸ್ಸೀಮಪ್ಪ ಬಂಗೇರ, ನಿಂಗಪ್ಪ ರಾಜಪ್ಪ ಸೊಟ್ಟಕ್ಕನವರ, ಶೇಖಪ್ಪ ನಾಗಪ್ಪ ಸೊಟ್ಟಕ್ಕನವರ ಮುನೀರ್ ಅಹ್ಮದ್ ಗೊಂದಿ, ಕೃಷ್ಣಾ ಸುಣಗಾರ ಎಂಬುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆಂದು ಅವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆ ಯನ್ನು ಜಿಲ್ಲಾ ದಸ್ತಾವೇಜು ಬರಹಗಾರರಾದ ಗಾಜೀಪುರ ರವರು ಬರೆದಿರುತ್ತಾರೆ. ಸಾಕ್ಷಿಯು ದಾನಪತ್ರವನ್ನು ಭಾಗೀರಥಿ ಬಾಯಿ ರವರು ಬರೆದು ಕೊಟ್ಟಿರುತ್ತಾರೆಂದು ಅವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅವರ ಸಹಿಯನ್ನು ಈಗಾಗಲೇ ನಿ.ಡಿ-25(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿಯು ಸದರಿ ದಾನ ಪತ್ರವನ್ನು ಗಂಗಾಪರಮೇಶ್ವರಿ ವಿವಿದೋದ್ದೇಶ ಸೇವಾ ಸಮಿತಿ ಕಲ್ಲಾಪುರದ ಅಧ್ಯಕ್ಷರಾದ ಶಿವಾನಂದ ಗೌರಕ್ಕನವರ ರವರು ಸಹಿಯನ್ನು ಹಾಕಿ ದಾನವನ್ನು ಪಡೆದುಕೊಂಡಿರುತ್ತಾರೆ ಎಂದು ಅವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅವರ ಸಹಿಯನ್ನು ಈಗಾಗಲೇ ನಿ.ಡಿ-25(ಎ) ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲುಃ ವಾದಿಯ  ಪರ ಶ್ರೀ ಜಿ.ಎಸ್.ಕೆ  ವಕೀಲರಿಂದಃ</u>**

ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ನ್ಯಾಯ ಮತ್ತು ಸಮ್ಮತತೆ ಆಧಾರದ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ